ಹೆಚ್ಚುವರಿ ಸಿವಿಲ್ **ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪಿರಿಯಾಪಟ್ಟಣ.**

**ಸಿ.ಸಿ. 446/2019**

| | | |
|---|---|---|
| ಸಾಕ್ಷಿಯ ಹೆಸರುಃ | ಚಿಕ್ಕಸ್ವಾಮಿ | ಫ್ರಾಸಾಃಃ 2 |
| ತಂದೆ ಹೆಸರುಃ | ಮರಿಚನ್ನೇಗೌಡ | ಚಾಸಾಃಃ 1 |
| ವಯಸ್ಸುಃ | 41 ವರ್ಷ | ಪ್ರಮಾಣೀಕರಿಸಿದ<br>ದಿಃ 04/09/2023 |
| ಉದ್ಯೋಗಃ | ಆರಕ್ಷಕ ನಿರೀಕ್ಷಕರು,<br>ಬಸವೇಶ್ವರ ನಗರ ಪೊಲೀಸ್ ಠಾಣೆ,<br>ಬೆಂಗಳೂರು | |
| ವಾಸಸ್ಥಳಃ | ಬೆಂಗಳೂರು. | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ ರವರಿಂದಃ

ನಾನು 27/06/2016 ರಿಂದ 09/10/2018 ರವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ 19/02/2017 ರಂದು ಬೆಳಿಗ್ಗೆ 4.00 ಜಾವದಲ್ಲಿ ನಾನು ಠಾಣಾ ವ್ಯಾಪ್ತಿಯಲ್ಲಿದ್ದಾಗ ಬಂದ ಖಚಿತ ಮಾಹಿತಿ ಏನಂದರೆ ಮರಟಿಕೊಪ್ಪಲಿನ ಶೇಖರ್ ರವರ ಜಮೀನಿನ ಬಳಿಯಲ್ಲಿ ಕಾವೇರಿ ಹೊಳೆಯ ಹಂಚಿನಲ್ಲಿ ಅಕ್ರಮವಾಗಿ ಮರಳು ತುಂಬುತ್ತಿರುವ ಬಗ್ಗೆ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಕೂಡಲೇ ಸಿಬ್ಬಂದಿಗಳಾದ ಚಾಸಾ-8 ರಿಂದ 10 ರವನ್ನು ಬರಮಾಡಿಕೊಂಡು ಅವರುಗಳ ಸಹಾಯದಿಂದ ಪಂಚರಾದ ಫ್ರಾಸಾ-1 ಮತ್ತು ಚಾಸಾ-3 ರವರನ್ನು ಬರಮಾಡಿಕೊಂಡು ನನಗೆ ಬಂದ ಮಾಹಿತಿಯನ್ನು ಅವರಿಗೆ ತಿಳಿಸಿ, ದಾಳಿ ಮಾಡುವ ಸಂದರ್ಭದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡು ಒಂದು ಖಾಸಗಿ ವಾಹನದಲ್ಲಿ ಒಟ್ಟಿಗೆ ತೆರಳಿದೆವು. ಸುಮಾರು 4.45 ಗಂಟೆಗೆ ಬಂದ ಮಾಹಿತಿ ಮೇರೆಗೆ ಆ ಸ್ಥಳಕ್ಕೆ ತೆರಳಿ ಸ್ವಲ್ಪ ದೂರದಲ್ಲಿ

ನಿಂತು ಮರೆಯಾಗಿ ನೋಡಲಾಗಿ ಒಂದು ಟ್ರಾಕ್ಟರ್ ಮತ್ತು ಟ್ರಾಲಿಯಲ್ಲಿ 3 ಜನರು ಮರಳನ್ನು ತುಂಬುತ್ತಿರುವುದು ಕಂಡುಬಂದಿದ್ದು, ಅದನ್ನು ಖಚಿತಪಡಿಸಿಕೊಂಡು ನಾವು ಅವರನ್ನು ಹಿಡಿಯಲು ಸುತ್ತುವರೆದಾಗ ಅವರು ನಮ್ಮಿಂದ ತಪ್ಪಿಸಿಕೊಂಡು ಹೋಗಿರುತ್ತಾರೆ. ನಂತರ ಅವರಗಳ ಬಗ್ಗೆ ಮಾಹಿತಿ ತಿಳಿಯಲಾಗಿ ಅವರ ಹೆಸರು ತೀರ್ಥ, ರಾಮಚಂದ್ರ, ಶ್ರೀನಿವಾಸ ಎಂದು ತಿಳಿದು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಬೆಳಿಗ್ಗೆ 5.00 ರಿಂದ 6.00 ಗಂಟೆ ವರೆಗೆ ಸ್ಥಳದಲ್ಲಿದ್ದಂತಹ ಟ್ರಾಕ್ಟರ್ ನಂಬರ್ ಕೆಎ–45–ಟಿ–8396, ವಾಹನವನ್ನು ಅಮಾನತ್ತು ಪಡಿಸಿಕೊಂಡು, ಮಹಜರ್ ಕ್ರಮ ಜರುಗಿಸಿ, ವಾಪಸ್ಸು ಠಾಣೆಗೆ ಬಂದು ವರದಿಯೊಂದಿಗೆ ಠಾಣಾ ಎಸ್.ಹೆಚ್.ಒ.ರವರಿಗೆ ನೀಡಿರುತ್ತೇನೆ. ಸಾಕ್ಷಿಯು ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.1(ಬಿ)** ಎಂದು ಗುರುತಿಸಲಾಯಿತು. ಟ್ರಾಕ್ಟರ್ ನ ಟ್ರಾಲಿಯಲ್ಲಿ ಸುಮಾರು 60 ಬಾಂಡಲಿಯಷ್ಟು ಮರಳು ಇತ್ತು. ಮರಳನ್ನು ತುಂಬಲು ಉಪಯೋಗಿಸುತ್ತಿದ್ದ 2 ಗುದ್ದಲಿ ಮತ್ತು 2 ಬಾಂಡಲಿಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಈ ದಿನ ನ್ಯಾಯಾಲಯದಲ್ಲಿ 2 ಗುದ್ದಲಿ ಮತು 2 ಬಾಂಡಲಿಗಳು ಇವೆ. ಅವುಗಳನ್ನು ಮು.ಮಾ.1 ರಿಂದ 4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಡತದಲ್ಲಿರುವ ಪೋಟೋವನ್ನು ತೋರಿಸಿ ಅದೇ ಟ್ರಾಕ್ಟರನ್ನು ಅಮಾನತ್ತು ಪಡಿಸಿಕೊಂಡಿದ್ದಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು **ನಿಪಿ.3** ಎಂದು ಗುರುತಿಸಲಾಯಿತು. ನಾವು ದಾಳಿಮಾಡಿದಂತಹ ಸಮಯದಲ್ಲಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ.

**ಪಾಟೀ ಸವಾಲುಃ** ಆರೋಪಿತರ **ಪರ ಶ್ರೀ** ಡಿ.ಪಿ.ಎಲ್. **ವಕೀಲರಿಂದಃ**

3. ಮಾಹಿತಿ ಬಂದಾಗ ನಾನು ನನ್ನ ಮನೆಯಲ್ಲಿದ್ದೆ. ದಾಳಿ ಮಾಡಿದ ದಿನ ಠಾಣಾಧಿಕಾರಿಯಾಗಿ ಯಾರಿದ್ದರು ಎಂದರೆ ಸಾಕ್ಷಿಯು ಕಡತವನ್ನು ಪರಿಶೀಲಿಸಿ ಚಾಸಾ-11 ರವರು ಇದ್ದರು ಎಂದು ನುಡಿಯುತ್ತಾರೆ. ಮಾಹಿತಿ ಬಂದಾಗ ಠಾಣಾಧಿಕಾರಿಯೇ ದಾಳಿ ಮಾಡಲು ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ಠಾಣಾಧಿಕಾರಿಯನ್ನು ನಮ್ಮ ಜೊತೆಗೆ ಕರೆದುಕೊಂಡು ಹೋಗಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಠಾಣಾಧಿಕಾರಿ ಠಾಣಾ ಉಸ್ತುವಾರಿಯಲ್ಲಿದ್ದ ಕಾರಣ ಅವರನ್ನು ಕರೆದುಕೊಂಡು ಹೋಗಿಲ್ಲ ಎಂದು ನುಡಿಯುತ್ತಾರೆ. ಠಾಣಾಧಿಕಾರಿಗೆ ಎಸ್.ಹೆಚ್.ಡಿ.ಯಲ್ಲಿ ನಮೂದಿಸಿ ತಿಳಿಸಿರುತ್ತೇನೆ. ಎಸ್.ಹೆಚ್.ಡಿಯಲ್ಲಿ ನನಗೆ ಯಾರು ಮಾಹಿತಿ ಕೊಟ್ಟರು ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮಾಹಿತಿ ಬಂದ ಬಗ್ಗೆ ಡೈರಿಯಲ್ಲಿ ನಮೂದಿಸಿದ್ದೇನೆ. ಸದರಿ ಡೈರಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ನಾನು ಠಾಣೆಯನ್ನು ಬಿಟ್ಟ ಸಮಯ ಬೆಳಿಗ್ಗೆ 4.10-4.15 ಆಗಿತ್ತು. ಠಾಣೆಯಿಂದ ಹಳಗನಹಳ್ಳಿ ಮುಖಾಂತರ ಹೋಗಿ ಮರಟಿಕೊಪ್ಪಲು ತಲುಪಿದೆವು. ಒಬ್ಬ ಪಂಚರನ್ನು ಬೆಟ್ಟದಪುರದಲ್ಲಿ ಕರೆದುಕೊಂಡು ಹೋದೆವು. ಸಾಕ್ಷಿ ಕಡತವನ್ನು ನೋಡಿ ಅವರ ಹೆಸರು ಮೋಹನ್ ಎಂದು ನುಡಿಯುತ್ತಾರೆ. ಇನ್ನೊಬ್ಬ ಪಂಚರ ಹೆಸರು ಕೃಷ್ಣೇಗೌಡ, ಅವರನ್ನು ಹಳಗನಹಳ್ಳಿಗೆ ಕರೆಸಿಕೊಂಡು ಸ್ಥಳಕ್ಕೆ ಹೋದೆವು. ಚಾಸಾ-2 ರವರನ್ನು ಫೋನ್ ಮಾಡಿ ಠಾಣೆಗೆ ಕರೆಸಿಕೊಂಡಿರುತ್ತೇವೆ. ನನ್ನ ವರದಿಯಲ್ಲಿ ಚಾಸಾ-2 ರವರನ್ನು ದೂರವಾಣಿ ಮುಖಾಂತರ ಹಳಗನಹಳ್ಳಿಗೆ ಕರೆಸಿಕೊಂಡಿದ್ದೇವೆ ಎಂದು ನಮೂದಿಸಿಲ್ಲ. ಸದರಿ ವರದಿಯಲ್ಲಿ ಪಂಚರ ಫೋನ್ ನಂಬರ್ ನಮೂದಿಸಿಲ್ಲ. ನಾವು ಹಳಗನಹಳ್ಳಿಗೆ ಹೋದಾಗ ಬೆಳಿಗ್ಗೆ 4.20 ಗಂಟೆ ಆಗಿತ್ತು. 4.25 ಗಂಟೆಗೆ ಚಾಸಾ-2 ರವರು ಬಂದರು. ಹಳಗನಹಳ್ಳಿಗೂ ಮರಟಿಕೊಪ್ಪಲಿಗೂ ಸುಮಾರು 7-8 ಕಿ.ಮೀ. ಅಂತರ ಇದೆ. ಹಳಗನಹಳ್ಳಿಯಿಂದ ಮರಟಿಕೊಪ್ಪಲಿಗೆ ಸುಮಾರು 15 ಕಿ.ಮೀ. ಅಂತರ ಇದೆ ಎಂದರೆ ಸರಿಯಲ್ಲ. ಹಳಗನಹಳ್ಳಿಯಿಂದ ಕಣಗಾಲ ಗ್ರಾಮಕ್ಕೆ ಸುಮಾರು 5 ಕಿ.ಮೀ. ಅಂತರ ಇದೆ. ಕಣಗಾಲಿನಿಂದ ಹೊನ್ನಾಪುರಕ್ಕೆ ಸುಮಾರು 7-8

ಕಿ.ಮೀ. ಅಂತರ ಇದೆ. ನಾವು ಸ್ಥಳಕ್ಕೆ ಯಾವ ಊರುಗಳ ಮೇಲೆ ಹೋದೆವು ಎಂದು ನೆನಪಿಲ್ಲ. ಮರಟಿಕೊಪ್ಪಲು ಗ್ರಾಮದಿಂದ ಕೃತ್ಯ ಸ್ಥಳವು ಸುಮಾರು 1 ಕಿ.ಮೀ. ಅಂತರ ಇದೆ. ನಾವು ಖಾಸಗಿ ವಾಹನದಲ್ಲಿ ಸ್ಥಳಕ್ಕೆ ಹೋಗಿದ್ದೆವು. ಆ ವಾಹನದ ಸಂಖ್ಯೆ ನೆನಪಿಲ್ಲ. ಆ ವಾಹನ ಯಾರಿಗೆ ಸೇರಿದ್ದು ಎಂದು ಈಗ ನೆನಪಿಲ್ಲ. ಸದರಿ ವಾಹನಕ್ಕೆ ರೂ.800/- ಬಾಡಿಗೆ ಕೊಟ್ಟಿದ್ದೆವು. ವಾಹನದ ಮಾಲೀಕರಿಗೆ ಬಾಡಿಗೆ ಕೊಟ್ಟ ಬಗ್ಗೆ ರಸೀದಿ ಇಲ್ಲ. ನನ್ನ ವರದಿಯಲ್ಲಿ ಕಾರಿನಲ್ಲಿ ಹೋಗಿದ್ದೆವು ಎಂದು ನಮೂದಿಸಿಲ್ಲ, ಆದರೆ ಖಾಸಗಿ ವಾಹನ ಎಂದು ನಮೂದಿಸಿದ್ದೇನೆ. ಆರೋಪಿತರನ್ನು ಸುಮಾರು 150 ಮೀಟರ್ ಅಂತರದಿಂದ ನೋಡಿರುತ್ತೇವೆ. ಆಗ ಸಮಯ ಸುಮಾರು 4.45 ಗಂಟೆ ಆಗಿರಬಹುದು. ಆ ಸಮಯದಲ್ಲಿ ಕತ್ತಲೆಯಾಗಿತ್ತು ಎಂದರೆ ಸಾಕ್ಷಿಯು ತುಂಬ ಕತ್ತಲೆ ಇರಲಿಲ್ಲ ಎಂದು ನುಡಿಯುತ್ತಾರೆ. 150 ಮೀ. ಅಂತರದಿಂದ ನೋಡಿದಾಗ ಯಾರು ಮರಳನ್ನು ತುಂಬುತಿದ್ದರು ಎಂದು ಸ್ಪಷ್ಟವಾಗಿ ಕಾಣಲಿಲ್ಲ. ನಾವು 20-30 ಮೀಟರ್ ಅಂತರಕ್ಕೆ ಹೋದಾಗ ಅವರು ನಮ್ಮನ್ನು ನೋಡಿ ಓಡಿ ಹೋದರು. ನನಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಸ್ಥಳದಲ್ಲಿ ನೋಡಿಲ್ಲ ಎಂದರೆ ಸರಿಯಲ್ಲ. ಬಾತ್ಮಿದಾರರು ಆರೋಪಿತರನ್ನು ತೋರಿಸಿರುತ್ತಾರೆ. ಬಾತ್ಮಿದಾರರನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಸಾಕ್ಷಿ ಪುನಃ ಬಾತ್ಮಿದಾರರರು ನಮ್ಮೊಂದಿಗೆ ಸ್ಥಳಕ್ಕೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಸ್ಥಳದಲ್ಲಿ ಆರೋಪಿತರನ್ನು ಯಾರೂ ಗುರುತಿಸಲಿಲ್ಲ. ಮಹಜರ್ ನಲ್ಲಿ ಆರೋಪಿತರ ಹೆಸರನ್ನು ಬಾತ್ಮಿದಾರರಿಂದ ತಿಳಿದುಕೊಂಡು ಬರೆದಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಗುರುತಿಸಿ ಅವರ ಹೆಸರನ್ನು ಹೇಳಲು ಆಗುವುದಿಲ್ಲ. ಎಸ್.ಹೆಚ್.ಡಿ ಯಲ್ಲಿ ಆರೋಪಿತರ ಹೆಸರು ಮತ್ತು ಅವರ ತಂದೆಯ ಹೆಸರನ್ನು ನಮೂದಿಸಿದ್ದೇನೋ ಇಲ್ಲವೋ ಗೊತ್ತಿಲ್ಲ. ಮರಟಿಕೊಪ್ಪಲಿಗೆ ಹೋಗಲು ಗೊರಹಳ್ಳಿ, ಚಪ್ಪರದಹಳ್ಳಿ, ಅಂಬಲಾರೆ, ದೊಡ್ಡಕಮರವಳ್ಳಿ ಮುಖಾಂತರ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿಯು ಬೇರೆ ರಸ್ತೆಯಲ್ಲಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಈಗ ಹೇಳಿದ ರಸ್ತೆಯು ಹತ್ತಿರದ ರಸ್ತೆ

ಎಂದರೆ ಸಾಕ್ಷಿಯು ಇನ್ನೂ ಬೇರೆ ರಸ್ತೆಗಳು ಇವೆ ಎಂದು ನುಡಿಯುತ್ತಾರೆ. ಪಂಚರಾದ ಮೋಹನ್ ಬೆಟ್ಟದಪುರದ ಯಾವ ಬೀದಿ ಎಂದರೆ ಸಾಕ್ಷಿಯು ಕಡತವನ್ನು ನೋಡಿ ಆವರ್ತಿ ಗ್ರಾಮದವರು ಎಂದು ನುಡಿಯುತ್ತಾರೆ. ಪಂಚರು ನಮ್ಮೊಂದಿಗೆ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಮಹಜರ್ ಕ್ರಮ ಜರುಗಿಸಿ, ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮುದ್ದೇಮಾಲುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.